ಸರ್ಕಾರ ಈಗಾಗಲೇ ಸಾಧಾರಣ 82 ಸಾವಿರದ 425 ಜನರಿಗೆ ನಾವೀಗ 234 ಡಾಟ್ ಕಾಮ್ ಮುಖಾಂತರ ತರಬೇತಿ ಕೊಟ್ಟಿದ್ದೇವೆ. ಅದರಲ್ಲಿ ಸಾಧಾರಣ 30 ಸಾವಿರದ ಮೇಲೆ ಸರ್ಟಿಫಿಕೇಟ್ ಕೊಟ್ಟಿದ್ದೇವೆ. ಒಂದು ವೇಳೆ ನೇರವಾಗಿ ದೂರು ಇದ್ದರೆ, ನಮ್ಮ ಗಮನಕ್ಕೆ ತಂದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಹಿರೇಕೆರೂರಿನಲ್ಲಿ ಕ್ರೀಡಾಂಗಣ ನಿರ್ಮಿಸುವ ಬಗ್ಗೆ

89 (637) ಶ್ರೀ ಬನ್ನಿಕೋಡ್ ಬಿ.ಹೆಚ್. (ಹಿರೇಕೆರೂರು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಕೇಂದ್ರವಾಗಿದ್ದರೂ ಕ್ರೀಡೆಗಳನ್ನು ನಡೆಸಲು ಸೂಕ್ತ ಮೈದಾನವಿಲ್ಲದೆ ಇರುವುದನ್ನು ಸರ್ಕಾರ ಅರಿತಿದೆಯೇ?

ಆ) ತಾಲ್ಲೂಕಿನಲ್ಲಿರುವ ಕ್ರೀಡಾಳುಗಳಿಗೆ ಸೂಕ್ತ ಸ್ಥಳಾವಕಾಶವನ್ನು ಮಾಡಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವುದಿಲ್ಲವೇ?

ಇ) ಹಾಗಿದ್ದರೆ, ತಾಲ್ಲೂಕಿಗೆ ಕ್ರೀಡಾ ಮೈದಾನ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೆ, ಈ ತಾಲ್ಲೂಕು ಕ್ರೀಡಾಂಗಣಕ್ಕೆ ಅವಶ್ಯ ಇರುವಂತಹ ಜಮೀನನ್ನು ಒದಗಿಸಲಿಕ್ಕೆ ಅಲ್ಲಿ ಯಾವುದೇ ಸರ್ಕಾರೀ ಜಮೀನು ಇಲ್ಲ. ಭೂ ಸ್ವಾಧೀನ ಮಾಡಿಕೊಂಡು ಕೂಡಲೇ ಆ ಒಂದು ಜಮೀನಿನಲ್ಲಿ ಕ್ರೀಡಾಂಗಣ ಮಾಡಲಿಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಂ. ದಿವಾಕರ ಬಾಬು (ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಅಲ್ಲಿ ಜಮೀನು ಲಭ್ಯ ಇಲ್ಲ ಎಂಬುದು ನಿಜ. ಸರ್ಕಾರ ಜಮೀನಿಗಾಗಿ ನೋಡುತ್ತಿದ್ದೇವೆ. ಈಗ ಹಣಕಾಸಿನ ಲಭ್ಯತೆ ಸಾಧಾರಣ ಬಹಳಷ್ಟು ತೊಂದರೆ ಇರುವ ಕಾರಣ ಮುಂದೆ ಈ ಜಮೀನಿನ ಅಕ್ವಿಸಿಷನ್ ಮಾಡಿ ಈ ಕ್ರೀಡಾಂಗಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮುದ್ದೇನಹಳ್ಳಿ ಹಾಗೂ ನಿಸರ್ಗಧಾಮ ರಂಗಧಾಮ ಚಾನಲ್ ಹತ್ತಿರ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸುವುದು.

91 (1070) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವ ವಿಖ್ಯಾತ ಇಂಜಿನಿಯರ್ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯರವರ ಜನ್ಮ ಸ್ಥಳವಾದ ಮುದ್ದೇನಹಳ್ಳಿ ಹಾಗೂ ನಿಸರ್ಗಧಾಮ ರಂಗಧಾಮ ಚಾನೆಲ್ ಹತ್ತಿರ ಪ್ರವಾಸಿ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ:

ಆ) ಇದ್ದಲ್ಲಿ ಮೇಲ್ಕಂಡ ಎರಡು ಸ್ಥಳಗಳಲ್ಲಿ ಪ್ರವಾಸಿ ಕೇಂದ್ರಗಳ ಮಂಜೂರಾತಿಗಾಗಿ ಕೈಗೊಳ್ಳಲಿರುವ ಕ್ರಮವೇನು? (ವಿವರ ನೀಡುವುದು)

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀಮತಿ ಕೆ.ಎ. ಅನುಸೂಯಮ್ಮ ನಟರಾಜನ್:- ಮಾನ್ಯ ಅಧ್ಯಕ್ಷರೆ, ಉತ್ತರ ತುಂಬಾ ಉದಾಸೀನ ಆಗಿದೆ. ನಮ್ಮ ಚಿಕ್ಕಬಳ್ಳಾಪುರ ದಿಂದ ಮುದ್ದೇನಹಳ್ಳಿ ಇಲ್ಲಿಗೆ ಸುಮಾರು ಐದು ಕಿಲೋಮೀಟರ್ ದೂರ ಇದೆ. ಅದು ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮ ಸ್ಥಳವಾಗಿದ್ದು, ವಿಶ್ವ ವಿಖ್ಯಾತ ಇಂಜಿನಿಯರ್ ಅವರ ಜನ್ಮಸ್ಥಳವಾಗಿದ್ದು ಈ ಇಂಜಿನಿಯರ್ ಹುಟ್ಟಿದ ಸ್ಥಳದಲ್ಲಿ ರಾಜ್ಯದ ಪ್ರಸಿದ್ಧಿಗೆ ಕಿರೀಟ ಪ್ರಾಯವಾಗಿರುವ ಗಿರಿ ಧಾಮ ನಂದಿಗೆ ಬಹಳ ಹತ್ತಿರ ಇದೆ. ಹೀಗೆ ಪ್ರವಾಸಕ್ಕಾಗಿ ಬರುವ ಪ್ರವಾಸಿಗರು ಮುದ್ದೇನಹಳ್ಳಿಗೂ ಸಹ ಭೇಟಿ ನೀಡುವಂತಹ ಸ್ಥಳವಾಗಿದೆ. ಇಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಸಮಾಧಿ ಸ್ಥಳ ಹಾಗೂ ಅವರ ಪೂರ್ವಜರು ವಾಸಿಸುತ್ತಿದ್ದಾರೆ. ಹಿಂದಿನ ಕಾಲದ ಹಳೆಯ ಮನೆಗಳು, ಅವಶೇಷಗಳು ಇಲ್ಲಿ ಕಾಣಲಾಗುತ್ತದೆ. ಮತ್ತು ಈ ಮಹಾನ್ ವ್ಯಕ್ತಿಯು ಉಪಯೋಗಿಸುತ್ತಿದ್ದ ವಸ್ತುಗಳ ವಸ್ತುಪ್ರದರ್ಶನ ಕೂಡ ನಡೆಯುತ್ತಿದೆ. ಪ್ರತಿ ವರ್ಷ ಸಪ್ಟೆಂಬರ್ 15 ರಂದು ಅವರು ಹುಟ್ಟಿದ ದಿನವನ್ನು ಮುದ್ದೇನಹಳ್ಳಿಯಲ್ಲಿ ಹಾಗೂ ರಾಜ್ಯದ ಅತ್ಯಂತ ಹೆಸರುವಾಸಿ ಇಂಜಿನಿಯರ್ ಅವರ ದಿನವನ್ನಾಗಿ ಆಚರಿಸುತ್ತಿದ್ದಾರೆ. ಇಂತಹ ಪುಣ್ಯ, ಮಹಾನುಭಾವರ ವ್ಯಕ್ತಿಯ ಜನ್ಮಸ್ಥಳದಲ್ಲಿ ಇದುವರೆಗೆ ಏಕೆ ಪ್ರವಾಸಿ ಮಂದಿರವನ್ನು ಕಟ್ಟಿಲ್ಲ ಎಂದು ನಾನು ಮತ್ತೆ ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸದಸ್ಯರು ಹೇಳಿದ ಹಾಗೆ ಭಾರತ ರತ್ನ ಪೂಜ್ಯ ವಿಶ್ವೇಶ್ವರಯ್ಯನವರು ಹುಟ್ಟಿದಂತಹ ಊರು ಬಹಳ ಮಹತ್ವದ್ದು. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರವಾಸಿಗರು ಅಲ್ಲಿಗೆ ಹೋದಾಗ ಮೂಲಭೂತ ಸೌಕರ್ಯಗಳ ನಿರ್ಮಾಣ ಆಗಬೇಕೆಂದು ಹೇಳಿದ್ದಾರೆ. ಸರ್ಕಾರ ಖಂಡಿತವಾಗಿ ಅದನ್ನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ. ಎರಡನೆಯದು, ಈಗಾಗಲೇ ಅಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅವರ ಮನೆ ಏನು ಇತ್ತು ಅದನ್ನು ಮ್ಯೂಸಿಯಂ ಆಗಿ ಕನ್‌ವರ್ಟ್ ಮಾಡಿದ್ದಾರೆ. ಆದರೂ ಸಹ ಇನ್ನೂ ಹೆಚ್ಚು ಮೂಲಭೂತ ಸೌಕರ್ಯಗಳು ಬೇಕು, ಅದನ್ನು ನಿರ್ಮಾಣ ಮಾಡಲಿಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ ಪ್ರಯತ್ನ ಮಾಡಲಾಗುವುದು.

ಅಧ್ಯಕ್ಷರು:- ಆಶ್ವಾಸನೆ ಕೊಟ್ಟಿದ್ದಾರಲ್ಲಾ, ಎಲ್ಲವನ್ನೂ ಮಾಡುತ್ತಾರೆ.

ಶ್ರೀಮತಿ ಕೆ.ಎ. ಅನುಸೂಯಮ್ಮ ನಟರಾಜನ್:- ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ವ್ಯವಸ್ಥೆಯೂ ಅಲ್ಲಿ ಆಗುತ್ತಿಲ್ಲ. ನಮಗೆ ತುಂಬಾ ನೋವನ್ನು ಉಂಟು ಮಾಡುತ್ತಿದೆ.

ಸರ್ಕಾರ ಇದನ್ನು ಎಕೆ ಗಮನಕ್ಕೆ ತೆಗೆದುಕೊಂಡಿಲ್ಲ? ನಮ್ಮ ವಿಶ್ವೇಶ್ವರಯ್ಯನವರು ಮೆಟ್ರಿಕ್ ಪರೀಕ್ಷೆಗೆ ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಇಡೀ ರಾತ್ರಿಯೆಲ್ಲಾ ನಡೆದುಕೊಂಡು ಹೋಗಿ ಮತ್ತೆ ಅವರ ತಾಯಿಯ ಹತ್ತಿರ ದುಡ್ಡು ತೆಗೆದುಕೊಂಡು ಮತ್ತೆ ಬೆಳಗಿನ ಜಾವಕ್ಕೆ ಇದೇ ಬೆಂಗಳೂರಿಗೆ ಬಂದು ಇಡೀ ಸ್ಕೂಲಿಗೆ ಹೈ ಮೆರಿಟ್‌ನಲ್ಲಿ ಪಾಸ್ ಆದರು. ಅಷ್ಟೇ ಅಲ್ಲದೇ ಯಾರೂ ಸಹ ಕಾವೇರಿಗೆ ಅಣೆಕಟ್ಟು ಕಟ್ಟಲು ಪ್ರಯತ್ನ ಮಾಡಿದರೂ ಆಗಲಿಲ್ಲ. ಆದರೂ ನಮ್ಮ ವಿಶ್ವೇಶ್ವರಯ್ಯನವರು ಅಣೆಕಟ್ಟನ್ನು ಕಟ್ಟಿದ್ದಾರೆ. ಮತ್ತು ಅವರು ಸಾಂಸಾರಿಕ ಜೀವನ ಬೇಡ. ಈ ದೇಹ ಈ ದೇಶಕ್ಕೋಸ್ಕರ ಎಂದು ಹೇಳಿ ಮುಡಿಪಾಗಿಟ್ಟು ಅವರು ಸೇವೆಯನ್ನು ರಾಜ್ಯಕ್ಕೆ ತುಂಬಾ ಸಲ್ಲಿಸಿದ್ದಾರೆ. ದೇಶ ವಿದೇಶಗಳಿಂದ ಅಲ್ಲಿಗೆ ತುಂಬಾ ಜನ ಬರುತ್ತಾರೆ. ಆದ್ದರಿಂದ ಈಗಾಗಲೇ ಮಾನ್ಯ ಸಚಿವರಾದ ಶ್ರೀ ರೋಷನ್ ಬೇಗ್ ಅವರಿಗೆ ಮೂರು ವರ್ಷದ ಹಿಂದೆಯೇ ಪ್ರಶ್ನೆ ಕೇಳಿದ್ದೆ. ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ, ನಿಧಾನ ಆಯಿತು. ಆದ್ದರಿಂದ ಕೂಡಲೇ ಪ್ರವಾಸಿ ಮಂದಿರವನ್ನು ಕಟ್ಟಿಸಿಕೊಡಬೆಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ ಎಲ್ಲಾ ಪ್ರಶ್ನೆಗಳಿಗೂ ಇಲ್ಲ ಎಂದು ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ.

ಅಧ್ಯಕ್ಷರು :- ಸದ್ಯಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:- ಸದ್ಯಕ್ಕೆ ಇಲ್ಲ ಎಂದು ಅವರು ಹೇಳಿಲ್ಲ. ವಿಶ್ವೇಶ್ವರಯ್ಯನವರ ಬಗ್ಗೆ ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ವಿಶ್ವೇಶ್ವರಯ್ಯನವರು ವಿಶ್ವವಿಖ್ಯಾತ ಇಂಜಿನಿಯರ್‌ರವರಾಗಿದ್ದರು. ತಾವು ಇಷ್ಟರಲ್ಲಿಯೇ ಅದನ್ನು ಮಾಡಬೇಕಾಗಿತ್ತು. ಯಾವುದೇ ಸರ್ಕಾರವಿರಬಹುದು ಇಷ್ಟರಲ್ಲಿಯೇ ಇದನ್ನು ಮಾಡಬೇಕಾಗಿತ್ತು. ಇದಕ್ಕೆ ಇಲ್ಲಾ ಎಂದು ಉತ್ತರ ಕೊಟ್ಟಿದ್ದೀರಿ. ಆ ರೀತಿ ಇಲ್ಲಾ ಎಂದು ಉತ್ತರ ಕೊಡಬಾರದಿತ್ತು. ಆದ್ದರಿಂದ ದಯಮಾಡಿ ತಕ್ಷಣದಲ್ಲೇ ಒಂದು ಕೋಟಿ ರೂ ಯಾದರೂ ಬಿಡುಗಡೆ ಮಾಡಿ ಆ ಕೆಲಸವನ್ನು ಪ್ರಾರಂಭ ಮಾಡಿಸುತ್ತೀರಾ?

ಶ್ರೀ ಎನ್. ಸಂಪಂಗಿ :- ಶ್ರೀಮತಿ ಅನುಸೂಯಮ್ಮ ನಟರಾಜನ್‌ರವರು ಕೇಳಿರುವುದು ಬಹಳ ಉತ್ತಮವಾದ ಪ್ರಶ್ನೆ. ಏಕೆಂದರೆ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿಯೇ ಮುದ್ದೇನಹಳ್ಳಿ ಇದೆ. ವಿಶ್ವೇಶ್ವರಯ್ಯನವರು ಮಾನ್ಯ ಜವಹರಲಾಲ್‌ನೆಹರೂ ರವರನ್ನೂ ಕರೆದುಕೊಂಡು ಬಂದು ಅವರು ಅಮೃತ ಹಸ್ತದಿಂದ ಉದ್ಘಾಟನೆ ಮಾಡಿಸಿದ್ದಂಥ ಗ್ರಂಥಾಲಯದಲ್ಲಿ ಇವತ್ತು ಭಿಕ್ಷುಕರು ಮತ್ತು ನಾಯಿಗಳು ಮಲಗುತ್ತಿವೆ. ಇದರ ಬಗ್ಗೆ ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದೇನೆ. ಆ ಗ್ರಂಥಾಲಯದ ಸ್ಥಿತಿಯನ್ನು ನೋಡಿದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಉದ್ಘಾಟನೆ ಮಾಡಿದ ಬಗ್ಗೆ ಶಿಲಾಶಾಸನವೊಂದಿದೆ, ಅದರ ಪಕ್ಕದಲ್ಲೇ ನಾಯಿಗಳು ಮಲಗುತ್ತವೆ. ವಿಶ್ವೇಶ್ವರಯ್ಯನವರು ಹುಟ್ಟಿದಂಥ ತಾಲ್ಲೂಕು ಬಹಳ ಹದಗೆಟ್ಟಿದೆ. ಆದ್ದರಿಂದ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಿ ಅದರ ಅಭಿವೃದ್ಧಿ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಮಾನ್ಯ ವಿಶ್ವೇಶ್ವರಯ್ಯನವರ ಬಗ್ಗೆ ಇಡೀ ದೇಶಕ್ಕೇ ಗೌರವವಿದೆ. ನಿಜವಾಗಿಯೂ ಇಷ್ಟರೊಳಗಾಗಿಯೇ ಈ ಕಾರ್ಯಕ್ರಮಗಳು ಆಗಬೇಕಾಗಿತ್ತು. ಮಾನ್ಯ ಸದಸ್ಯರು

ಇದರ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ನಾನೇ ಸ್ವತ: ಕೈಗಾರಿಕಾ ಸಚಿವನಾಗಿ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ ಅದೆಲ್ಲವನ್ನೂ ಮಾಡಲು ಪ್ರಯತ್ನಗಳನ್ನು ಮಾಡಲಾಗುವುದು.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್:- ರಂಗಧಾಮ ಚಾನಲ್ ಹತ್ತಿರ ಪ್ರವಾಸಿ ಮಂದಿರವೊಂದು ಬೇಕೆಂದು ಕೇಳಿದ್ದೇನೆ. ಅಲ್ಲಿನ ಸುತ್ತಮುತ್ತಲೂ ವಿಶಾಲವಾದ ಬೆಟ್ಟ ಗುಡ್ಡಗಳು ಇದೆ. ಮಳೆ ಬಿದ್ದರೆ ನೀರಿನ ಜುಳು ಜುಳು ಶಬ್ದಗಳು ಬರುತ್ತದೆ. ಹಕ್ಕಿಗಳು ಸುಂದರವಾಗಿ ಚಿಲಿಪಿಲಿ ಹಾಡುತ್ತವೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಕೋಲಾರ ಜಿಲ್ಲೆಯಲ್ಲಿರುವ ಸುಂದರವಾದ ಚಿಕ್ಕ ಬಳ್ಳಾಪುರವನ್ನು ಗಮನಿಸಬೇಕು. ಈ ಚಾನಲ್ ತುಂಬಿದರೆ ಎಂಟು ಹತ್ತು ಕೆರೆಗಳು ತುಂಬುತ್ತದೆ. ಆದ್ದರಿಂದ ಇಂಥ ಜಾಗದಲ್ಲಿ ಪ್ರವಾಸಿ ಮಂದಿರವೊಂದನ್ನು ಸ್ಥಾಪಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ನಾನೂ ಕೋಲಾರ ಜಿಲ್ಲೆಯವನಾಗಿ ಅವರ ಮಾತಿಗೆ ದ್ವನಿಗೂಡಿಸುತ್ತಿದ್ದೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ:- ನಾನೂ ಮತ್ತು ಅಧ್ಯಕ್ಷರು ಒಟ್ಟಿಗೇ ಅಲ್ಲಿಗೆ ಭೇಟಿ ಕೊಡೋಣ. ತಾವು ಏನು ಆದೇಶ ಕೊಡುತ್ತೀರೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆಯ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 10.3.2003ರ ಲಿಖಿತ ಮೂಲಕ ಉತ್ತರಿಸುವ 150 ಪ್ರಶ್ನೆಗಳ ಪೈಕಿ 125 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ (ಅ)

ಅಧ್ಯಕ್ಷರು:- ಮಂಡಿಸಲಾಯಿತು. ದಿನಾಂಕ:- 7.3.2003ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 6 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 129 ಪ್ರಶ್ನೆಗಳ ಪೈಕಿ 66 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ (ಆ)

(2) ಚುನಾವಣಾ ಪ್ರಸ್ತಾಪ

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆಯ ಸಚಿವರು) (ಶ್ರೀ ಡಿ.ಬಿ. ಚಂದ್ರೇಗೌಡರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿಯಮಾವಳಿ ನಿಯಮ 18 (1) (8) ರ ಪ್ರಕಾರ ಏಕಲ ಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನ ಮಂಡಳಿಗೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಅಧ್ಯಕ್ಷರು:- ಪ್ರಸ್ತಾಪ ಮಂಡಿಸಲಾಯಿತು. ಇನ್ನು ಶೂನ್ಯ ವೇಳೆ.

(3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಬೆಂಗಳೂರು ನಗರದಲ್ಲಿನ ಪಾರ್ಕಿಂಗ್ ಫೀ ಬಗ್ಗೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :- ಮಾನ್ಯ ಅಧ್ಯಕ್ಷರೆ,